ಕನ್ನಡಪ್ರಭ

Thursday 14th February 2019, Page No.06

# R.V. Universities were approved to set up new universities

**ಅಂಗೀಕಾರ** | **ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆಗೆ ವಿಧಾನಸಭೆ ಅಂಗೀಕಾರ**

# ಮಂಡ್ಯ ವಿವಿ, ಮಹಾರಾಣಿ ಕ್ಲಸ್ಟರ್ ವಿವಿ ಸ್ಥಾಪನೆಗೆ ಅಸ್ತು

• **ಕನ್ನಡಪ್ರಭ ವಾರ್ತೆ** ವಿಧಾನಸಭೆ

ಮಂಡ್ಯದ ಸರ್ಕಾರಿ ಕಾಲೇಜನ್ನು ಮೈಸೂರು ವಿಶ್ವವಿದ್ಯಾಲಯದಿಂದ ಪ್ರತ್ಯೇಕಗೊಳಿಸಿ 'ಮಂಡ್ಯ ವಿಶ್ವವಿದ್ಯಾಲಯ' ಸ್ಥಾಪಿಸುವುದು ಹಾಗೂ ಬೆಂಗಳೂರಿನ ಮಹಾರಾಣಿ ವಿಜ್ಞಾನ ಕಾಲೇಜು, ಕಲಾ ಕಾಲೇಜು ಹಾಗೂ ವಿಎಚ್‌ಡಿ ಗೃಹ ವಿಜ್ಞಾನ ಕಾಲೇಜುಗಳನ್ನು ಸೇರಿಸಿ 'ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ' ಸ್ಥಾಪಿಸುವ ರಾಜ್ಯ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆ ಸೇರಿದಂತೆ ಪ್ರಮುಖ ಮಸೂದೆಗಳನ್ನು ಚರ್ಚೆ ಇಲ್ಲದೆ ಬುಧವಾರ ವಿಧಾನಸಭೆಯಲ್ಲಿ ಅಂಗೀಕಾರ ಪಡೆಯಲಾಯಿತು.

ಆಡಿಯೋ ಪ್ರಕರಣವನ್ನು ಎಸ್‌ಐಟಿ ತನಿಖೆಗೆ ಒಪ್ಪಿಸುವುದನ್ನು ವಿರೋಧಿಸಿ ಬಿಜೆಪಿ ಸದಸ್ಯರ ಪ್ರತಿಭಟನೆ ಮಧ್ಯೆಯೇ ವಿವಿಧ ಸಚಿವರು ಮಂಡಿಸಿದ ಮಸೂದೆಗಳನ್ನು ಯಾವುದೇ ಚರ್ಚೆ ಇಲ್ಲದೆ ಅಂಗೀಕರಿಸಲಾಯಿತು. ಉನ್ನತ ಶಿಕ್ಷಣ ಸಚಿವ ಜಿ.ಟಿ. ದೇವೇಗೌಡ ಅವರು, 2019ನೇ ಸಾಲಿನ ರಾಜ್ಯ ವಿವಿಗಳ ತಿದ್ದುಪಡಿ ಮಸೂದೆ ಹಾಗೂ ಹೊಸ ವಿವಿಗಳ ಸ್ಥಾಪನೆಗೆ ಅನುಕೂಲವಾಗುವಂತೆ ಎನ್‌ಐಇ ವಿಶ್ವವಿದ್ಯಾಲಯ ಮಸೂದೆ-2019, ಆದಿಚುಂಚನಗಿರಿ ವಿವಿ (ತಿದ್ದುಪಡಿ) ಮಸೂದೆ ಮತ್ತು ಆರ್.ವಿ. ವಿಶ್ವವಿದ್ಯಾಲಯ ಮಸೂದೆ ಮಂಡಿಸಿದರು. ಈ ಮೂಲಕ ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಎನ್‌ಐಇ) ಹಾಗೂ ಆದಿಚುಂಚನಗಿರಿ ವಿವಿ, ಆರ್.ವಿ. ವಿಶ್ವವಿದ್ಯಾಲಯಗಳನ್ನು ನೂತನ ವಿವಿಗಳಾಗಿ ಸ್ಥಾಪಿಸಲು ಅಂಗೀಕಾರ ನೀಡಲಾಯಿತು.

**ಶಿಕ್ಷಕರ ವರ್ಗಾವಣೆ ಅವಧಿ 3 ವರ್ಷಕ್ಕೆ ಕಡಿತ:**

ಬೆಳಗಾವಿ ಅಧಿವೇಶನದಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿ ಮಂಡಿಸಿದ್ದ ಶಿಕ್ಷಕರ ವರ್ಗಾವಣೆ ಅವಧಿಯನ್ನು ಐದು ವರ್ಷಗಳಿಂದ ಮೂರು ವರ್ಷಗಳಿಗೆ ಕಡಿತ ಮಾಡುವ 2018ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಮಸೂದೆ ಮತ್ತು ಸಹಕಾರ ಸಚಿವ ಬಂಡೆಪ್ಪ ಕಾಶೆಂಪುರ ಮಂಡಿಸಿದ್ದ ಕರ್ನಾಟಕ ಋಣ ಪರಿಹಾರ ಮಸೂದೆಗಳನ್ನು ಪರ್ಯಾಲೋಚಿಸುವಂತೆ ಮನವಿ ಮಾಡಿದರು. ಗದ್ದಲದ ನಡುವೆಯೇ ಅಂಗೀಕಾರಗೊಂಡಿತು.